**ನಿರ್ದೇಶಕರು ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ.**
**ತಾಂತ್ರಿಕ ಶಿಕ್ಷಣ ಇಲಾಖೆ ಇವರ ನಡವಳಿಗಳು**

ವಿಷಯ: ಶ್ರೀ ಬಿ.ಎನ್.ಲೋಕೇಶ್, ಯಾಂತ್ರಿಕರು, ಇ&ಸಿ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಇವರ ಅನಧಿಕೃತ ಗೈರು ಹಾಜರಿಯ ಸಂಬಂಧ ದಂಡನೆಯ ಆದೇಶ.

ಉಲ್ಲೇಖ:
1) ಶ್ರೀ ಎಂ.ಜಿ.ಹಿರೇಮಠ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಇವರ ಅಂತಿಮ ವಿಚಾರಣಾ ವರದಿಯ ದಿನಾಂಕ: 7-12-2013 ರ ಆದೇಶದಂತೆ.
2) ನಿರ್ದೇಶನಾಲಯದ ದೋಷಾರೋಪಣಾ ಪಟ್ಟಿ ಸಂ: ಡಿಟಿಇ 02 ಡಿಇಕ್ಯೂ(1) 2012, ದಿ: 26–08–2013
3) ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಿದ ದಿ: 22–9–2013
4) ನಿವೃತ್ತ ಜಿಲ್ಲಾ ನ್ಯಾಯಾಧೀಶರು ವಿಚಾರಣೆಗೆ ಹಾಜರಾಗುವ ನೋಟಿಸ್ ದಿನಾಂಕ: 09–10–2013.
5) 2ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಿದ ದಿನಾಂಕ; 10–12–2013
6) ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಇವರ ಅಂತಿಮ ವಿಚಾರಣಾ ವರದಿಯ ದಿ: 7–8–2012
7) ಶ್ರೀ ಎ.ಕೃಷ್ಣಪ್ಪ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು, ಇವರ ಅಂತಿಮ ವಿಚಾರಣಾ ವರದಿಯನ್ನು ಅಂಗೀಕರಿಸಿ 2 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತವಲ್ಲದ ಪರಿಣಾಮವಾಗಿ 2013ನೇ ವರ್ಷದಿಂದ ಜಾರಿಗೆ ಬರುವಂತೆ ತಡೆಹಿಡಿಯಲಾದ ಆದೇಶ ಸಂ. ಡಿಟಿಇ 2 ಡಿಇಕ್ಯೂ (1) 2012, ದಿ: 9–11–2012

* – * – * – *

**ಪ್ರಸ್ತಾವನೆ:–**

ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿ ಯಾಂತ್ರಿಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಿ.ಎನ್. ಲೋಕೇಶ್, ಇವರು ಸರ್ಕಾರಿ ಸೇವೆಗೆ ಸೇರಿದಂದಿನಿಂದ ಇದುವರೆಗೂ ಪದೇ ಪದೇ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿ ಬೆಳೆಸಿಕೊಂಡಿರುತ್ತಾರೆ. ಮುಂದುವರೆದು ಸದರಿಯವರಿಗೆ ಈ ಅನಧಿಕೃತ ಗೈರು ಹಾಜರಿ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಹಲವಾರು ಜ್ಞಾಪನಗಳನ್ನು ಜಾರಿ ಮಾಡಿದ್ದು ಜ್ಞಾಪನಗಳಿಗೆ ಅವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ನಿರ್ದೇಶನಾಲಯದಿಂದ ದಿ: 04.07.2013 ರಂದು ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿ ಸದರಿ ನೋಟೀಸಿಗೂ ಸಹ ಉತ್ತರ ಸಲ್ಲಿಸಿರುವುದಿಲ್ಲ. ಅಲ್ಲದೆ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ಅಲ್ಲದೆ ಸರ್ಕಾರಿ ನೌಕರನಿಗೆ ಬೇಕಾದ ನಡತೆ ಹೊಂದಿರುವುದಿಲ್ಲ. ಇದರಿಂದ ಇವರು ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯನ್ನುಂಟುಮಾಡಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸುವುದರೊಂದಿಗೆ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ತೋರಿಸಲು ವಿಫಲರಾಗಿ ನಿರ್ಲಕ್ಷತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಡತೆ (ವರ್ತನೆ) ನಿಯಮಗಳು 1966 ರ ನಿಯಮ 3(1) ರ ಉಪನಿಯಮ (i) (ii) ಮತ್ತು (iii) ಹಾಗೂ ನಿಯಮ 21 ಮತ್ತು 22 ನ್ನು ಉಲ್ಲಂಘಿಸಿರುವ ಆರೋಪಕ್ಕೆ ಒಳಗಾಗಿರುತ್ತಾರೆ.

ದಿ: 09–03–2011 ರಿಂದ ದಿ: 09–12–2012ರ ವರೆಗೆ ದೀರ್ಘಾವಧಿ ಅನಧಿಕೃತ ಗೈರು ಹಾಜರಾದ ಹಿನ್ನಲೆಯಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ.ಕೃಷ್ಣಪ್ಪ ವಿಚಾರಣಾಧಿಕಾರಿಗಳು,

.........2

ಇವರನ್ನು ವಿಚಾರಣೆ ನಡೆಸಿ ವರದಿ ಸಲ್ಲಿಸಲು ನೇಮಿಸಲಾಗಿತ್ತು. ಅದರಂತೆ ಸದರಿ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಸಲ್ಲಿಸಿದ ವಿಚಾರಣಾ ವರದಿಯನ್ನು ಆಧರಿಸಿ ಈ ಕಛೇರಿಯ ಆದೇಶ ಸಂಖ್ಯೆ: ಡಿಟಿಇ 2 ಡಿಇಕ್ಯೂ (1) 2012, ದಿ: 09.11.2012 ರಲ್ಲಿ ಕರ್ನಾಟಕ ಸಿವಿಲ್ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 8 (�iii) ರಡಿಯಲ್ಲಿ ನಿಯಮ 3 ರಂತೆ ನಿಮಗೆ ಎರಡು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತವಲ್ಲದ ಪರಿಣಾಮವಾಗಿ 2013ನೇ ವರ್ಷದಿಂದ ಜಾರಿಗೆ ಬರುವಂತೆ ವೇತನ ಬಡ್ತಿಯನ್ನು ತಡೆ ಹಿಡಿಯಲಾಗಿತ್ತು. ಹಾಗೂ ಅವರ ಅನಧಿಕೃತ ಗೈರು ಹಾಜರಿಯ ಅವಧಿಯನ್ನು ಕೆಲಸ ಮಾಡದ ದಿನಗಳೆಂದು (ಡಾಯಿಸ್ ನಾನ್) (ಲೆಕ್ಕಕ್ಕಿಲ್ಲದ ಅವಧಿ) ಎಂದು ಪರಿಗಣಿಸಿ ಕಾರ್ಯವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು. ಸದರಿಯವರು ಯಾವುದೇ ರಜೆ ಅರ್ಜಿ ಸಲ್ಲಿಸದೇ ಅಥವಾ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ದಿ:10.12.2012 ರಂದು ಕಾರ್ಯವರದಿ ಮಾಡಿಕೊಂಡು ದಿ:11.12.2012 ರಿಂದ ದಿ:31.12.2012ರವರೆಗೆ ಅನಧಿಕೃತ ಗೈರು ಹಾಜರಾಗಿದ್ದು, ದಿ: 02.01.2013 ಮತ್ತು 08.01.2013 ರಂದು ಈ ಎರಡು ದಿನಗಳು ಮಾತ್ರ ಕಛೇರಿಗೆ ಹಾಜರಾಗಿದ್ದು, ನಂತರ ದಿ: 09.01.2013 ರಿಂದ ಇದುವರೆಗೂ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಅಲ್ಲದೆ ಈ ಹಿಂದೆಯೂ ಸಹ ಯಾವುದೇ ರಜೆ ಅರ್ಜಿ ಸಲ್ಲಿಸದೇ ಅಥವಾ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ದಿ: 09-03-2011 ರಿಂದ ದಿ: 09-12-2012ರ ವರೆಗೂ ದೀರ್ಘಾವಧಿ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಸದರಿ ಅನಧಿಕೃತ ಗೈರು ಹಾಜರಿ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಹಲವಾರು ಜ್ಞಾಪನಗಳನ್ನು ಜಾರಿ ಮಾಡಿದ್ದು ಸದರಿ ಜ್ಞಾಪನಗಳಿಗೆ ಯಾವುದೇ ಉತ್ತರ ಬಂದಿರುವುದಿಲ್ಲ ಹಾಗೂ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.

ದಿ: 02.01.2013, 08.01.2013, 18.03.2013, 21.03.2013 ಮತ್ತು 13.04.2013 ಈ ದಿನಾಂಕಗಳಂದು ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸದೇ ಕಛೇರಿಯಿಂದ ಹೊರಹೋಗಿರುತ್ತಾರೆ. ಸದರಿ ದಿನಾಂಕಗಳನ್ನು ವೇತನ ರಹಿತ ದಿನಗಳೆಂದು ಪರಿಗಣಿಸಲಾಗಿತ್ತು.

ವಸತಿ ಗೃಹದ ಬಾಡಿಗೆಯನ್ನು ಪಾವತಿಸಿರುವುದಿಲ್ಲ ಹಾಗೂ ಖಾಲಿ ಮಾಡಿರುವುದಿಲ್ಲ. ವಸತಿ ಗೃಹದ ಎಲೆಕ್ಟ್ರಿಕಲ್ ಬಿಲ್ ರೂ. 4,903/- ಗಳನ್ನು ಪಾವತಿಸಿರುವುದಿಲ್ಲ. ಮತ್ತು ವಸತಿ ಗೃಹವನ್ನು ಬೀಗ ಹಾಕಿಕೊಂಡು ಬೇರೆ ಸರ್ಕಾರಿ ನೌಕರರಿಗೂ ಅವಕಾಶ ಮಾಡಿಕೊಡದೆ ಸರ್ಕಾರದ ವಸತಿ ಗೃಹವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ಕೆನರಾ ಬ್ಯಾಂಕ್, ಚಿಂತಾಮಣಿ ಬ್ರಾಂಚ್ ಇಲ್ಲಿ ವೈಯಕ್ತಿಕ ಸಾಲವಾಗಿ ರೂ. 61,000/-ಗಳನ್ನು ಪಡೆದಿದ್ದು, ಬಾಕಿ ರೂ. 34,434/-ಗಳ ಸಾಲ ಪಾವತಿ ಮಾಡದೆ ಸುಸ್ತಿದಾರರಾಗಿರುತ್ತಾರೆ. ಇದರಿಂದ ಸದರಿಯವರು ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯನ್ನುಂಟುಮಾಡಿ ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸುವುದರೊಂದಿಗೆ ಕರ್ತವ್ಯದಲ್ಲಿ ಸತ್ಯ, ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ತೋರಿಸಲು ವಿಫಲರಾಗಿ ನಿರ್ಲಕ್ಷತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಡತೆ (ವರ್ತನೆ) ನಿಯಮಗಳು 1966 ರ ನಿಯಮ 3(1) ರ ಉಪನಿಯಮ (i) (ii) ಮತ್ತು (iii) ಹಾಗೂ ನಿಯಮ 19, 20 ಮತ್ತು 22 ನ್ನು ಉಲ್ಲಂಘಿಸಿರುವ ಆರೋಪಕ್ಕೆ ಒಳಗಾಗಿರುತ್ತಾರೆ. ಉಲ್ಲೇಖ (2)ರಲ್ಲಿನ ಈ ಕಚೇರಿಯ ನೋಟಿಸ್‌ನಲ್ಲಿ ದೋಷಾರೋಪಣ ಪಟ್ಟಿ ಮತ್ತು ಜಾರಿಗೊಳಿಸಿ 15 ದಿನದೊಳಗೆ ಲಿಖಿತ ವಿವರಣೆ ಸಲ್ಲಿಸಲು ಕೋರಲಾಗಿತ್ತು. ಸದರಿಯವರು ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಅವರ ವಿರುದ್ಧದ ಆರೋಪದ ಬಗ್ಗೆ ಶ್ರೀ ಎಂ.ಜಿ.ಹಿರೇಮಠ್, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಲಾಗಿ ಸದರಿ ವಿಚಾರಣಾಧಿಕಾರಿಗಳು

.........3

ವಿಚಾರಣೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ದಿ: 07-12-2013 ರಲ್ಲಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಅವಲೋಕಿಸಿದಾಗ ಆಪಾದಿತರು ಅವರ ವಿರುದ್ಧ ಮಾಡಿದ ಆರೋಪವನ್ನು ಒಪ್ಪಿಕೊಂಡಿದ್ದರಿಂದ ಮಂಡನಾಧಿಕಾರಿಗಳು ಆರೋಪವನ್ನು ಸಾಬೀತು ಪಡಿಸಲು ಯಾವುದೇ ಸಾಕ್ಷಿದಾರರನ್ನು ವಿಚಾರಿಸಿರುವುದಿಲ್ಲ. ಮತ್ತು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮಂಡನಾಧಿಕಾರಿಗಳು ಆರೋಪ ಸಾಬೀತಾಗಿದೆಯೆಂದು ಮೌಖಿಕ ವಾದ ಮಂಡಿಸಿರುತ್ತಾರೆ.

ಆಪಾದಿತರು ಅವರ ವಿರುದ್ಧ ಮಾಡಿದ ಆರೋಪವನ್ನು ತಮ್ಮ ಪ್ರಾರಂಭಿಕ ಹೇಳಿಕೆಯಲ್ಲಿ ಒಪ್ಪಿಕೊಂಡಿರುವುದರಿಂದ ಅವರ ವಿರುದ್ಧ ಮಾಡಿದ ಆರೋಪವು ಸಾಬೀತಾಗಿರುತ್ತದೆ ಎಂದು ನಿರ್ಧರಿಸಿ ಈ ಮುಖ್ಯಾಂಶವನ್ನು ಸಕಾರಾತ್ಮಕವಾಗಿ ನಿರ್ಣಯಿಸಿ ವಿಚಾರಣಾಧಿಕಾರಿಗಳು ಅಂತಿಮ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ವರದಿಯನ್ನು ಲಗತ್ತಿಸಿ, 2ನೇ ಕಾರಣ ಕೇಳುವ ನೋಟಿಸ್ ಮೂಲಕ ಜಾರಿ ಮಾಡಿ, ನೋಟಿಸು ತಲುಪಿದ 30 ದಿವಸಗಳೊಳಗಾಗಿ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ, ತಪ್ಪಿದ್ದಲ್ಲಿ ಅವರು ಹೇಳುವುದು ಏನೂ ಇಲ್ಲವೆಂದು ಭಾವಿಸಿ ಏಕಪಕ್ಷೀಯವಾಗಿ ನಿಯಮಾವಳಿಯ ಪ್ರಕಾರ ವಿಚಾರಣಾ ವರದಿಯನ್ನು ಅಂಗೀಕರಿಸಿ ಮುಂದಿನ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ತಿಳಿಸಿ ನೊಂದಾಯಿತ ಅಂಚೆ ಮೂಲಕ ಸ್ವವಿಳಾಸಕ್ಕೆ ಕಳುಹಿಸಿಕೊಡಲಾಗಿದ್ದು, ಸದರಿಯವರು ಸ್ವೀಕರಿಸಿರುವುದಿಲ್ಲ ಎಂದು ಅಂಚೆ ಕಛೇರಿಯಿಂದ ವಾಪಸ್ಸು ಬಂದ ಹಿನ್ನಲೆಯಲ್ಲಿ ಸದರಿಯವರಿಗೆ ನೋಟೀಸ್ ಮೂಲಕ ವಿವರಣೆ ಸಲ್ಲಿಸಲು ತಿಳಿಸಿ ದಿ:14-03-2014ರಂದು ದಿನಪತ್ರಿಕೆಗಳಾದ ಪ್ರಜಾವಾಣಿ, ವಿಜಯ ಕರ್ನಾಟಕಗಳಲ್ಲಿ ರಾಜ್ಯದ್ಯಾಂತ ಪ್ರಕಟಣೆ ಹೊರಡಿಸಲಾಗಿತ್ತು. ಆದಗ್ಯೂ ಸದರಿಯವರು ಯಾವುದೇ ವಿವರಣೆ ಸಲ್ಲಿಸಿರುವುದಿಲ್ಲ, ಮತ್ತು ಖುದ್ದಾಗಿ ಹಾಜರಾಗಿರುವುದಿಲ್ಲ. ಆದ್ದರಿಂದ ಕರ್ತವ್ಯ ನಿರ್ಲಕ್ಷತೆ ತೋರಿ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿ ಧೀರ್ಘಾವಧಿ ಅನಧಿಕೃತ ಗೈರುಹಾಜರಾದ ಆರೋಪದ ಮೇರೆಗೆ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ಸಂಖ್ಯೆ: ಡಿಟಿಇ 02 ಡಿಇಕ್ಯೂ(1) 2012 / 2065 ದಿನಾಂಕ: 12-09-2014

ಮೇಲ್ಕಂಡ ಪ್ರಸ್ತಾವನೆಯನ್ನು ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರ ವಿಚಾರಣಾ ಅಂತಿಮ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಶ್ರೀ ಬಿ.ಎನ್.ಲೋಕೇಶ್, ಯಾಂತ್ರಿಕರು, ಇ&ಸಿ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಆದ ಇವರು ಯಾವುದೇ ಮುನ್ಸೂಚನೆಯನ್ನು ನೀಡದೆ, ಮೇಲೆ ತಿಳಿಸಿರುವಂತೆ ಕರ್ತವ್ಯಕ್ಕೆ ದೀರ್ಘಾವಧಿ ಅನಧಿಕೃತ ಗೈರು ಹಾಜರಾಗಿ ಸರ್ಕಾರಿ ಕೆಲಸವನ್ನು ನಿರ್ಲಕ್ಷಿಸಿ ಹಾಗೂ ಮೇಲಧಿಕಾರಿಗಳ ಆದೇಶಗಳನ್ನು ಉಲ್ಲಂಘಿಸಿರುವ ಆರೋಪ ಸಾಬೀತಾಗಿರುವುದರಿಂದ ಹಾಗೂ ಸರ್ಕಾರಿ ನೌಕರರಿಗೆ ತರವಲ್ಲದೆ ವರ್ತನೆ ಹೊಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ [ವರ್ಗೀಕರಣ ನಿಯಂತ್ರಣ ಹಾಗೂ ಮೇಲ್ಮನವಿ] ನಿಯಮಾವಳಿ 1957 ರ ನಿಯಮ 8[vi] ರಂತೆ

..........4

ಶ್ರೀ ಬಿ.ಎನ್.ಲೋಕೇಶ್, ಯಾಂತ್ರಿಕರು, ಇ&ಸಿ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ.** ಅಲ್ಲದೇ ಸದರಿಯವರ ಅನಧಿಕೃತ ಗೈರುಹಾಜರಿಯ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 8 ಉಪನಿಯಮ 14(ಎ) ಪ್ರಕಾರ ಲೆಕ್ಕಕ್ಕಿಲ್ಲದ ಅವಧಿ (Dies Non) ಎಂದು ಪರಿಗಣಿಸಲಾಗಿದೆ.

ನಿರ್ದೇಶಕರು.
ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ.

ಇವರಿಗೆ,

1. ಶ್ರೀ ಬಿ.ಎನ್. ಲೋಕೇಶ್, ಖ/ಂ ನಾಗರಾಜ್, ಐಶ್ವರ್ಯ ಫ್ಯಾನ್ಸಿ ಗಿಫ್ಟ್ ಸೆಂಟರ್, ಮೊದಲನೇ ಮುಖ್ಯ ರಸ್ತೆ, ಸಿಹರು ರಸ್ತೆ, ನ್ಯೂಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು.
2. ಶ್ರೀ ಬಿ.ಎನ್.ಲೋಕೇಶ್, ಯಾಂತ್ರಿಕರು, ಇ&ಸಿ ವಿಭಾಗ, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ.
3. ಶ್ರೀ ಬಿ.ಎನ್.ಲೋಕೇಶ್, ನಂ. 06 ಮತ್ತು 07, 06ನೇ ಅಡ್ಡರಸ್ತೆ, ಶ್ರೀಕಂಠೇಶ್ವರ ಲೇಔಟ್, ಕೆಂಗೇರಿ ಉಪನಗರ, ಕೆಂಗೇರಿ, ಬೆಂಗಳೂರು.
4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವ ಸಲುವಾಗಿ ಸಿ.ಡಿ.ಯಲ್ಲಿ ಮುದ್ರಿಸಿ ಕಳುಹಿಸಲಾಗಿದೆ.

ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

1. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, [ಉನ್ನತ ಶಿಕ್ಷಣ], ಬಹುಮಹಡಿ ಕಟ್ಟಡ, ಬೆಂಗಳೂರು.
2. ಮಹಾಲೇಖಪಾಲರು, [ಎ&ಇ], ಕರ್ನಾಟಕ [ವಲಯ], ಬೆಂಗಳೂರು.
3. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
5. ಉಪ ಖಜಾನಾಧಿಕಾರಿಗಳು, ಖಜಾನೆ ಇಲಾಖೆ, ಚಿಂತಾಮಣಿ.
6. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಕಾಸಸೌಧ, ಬೆಂಗಳೂರು
7. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಬೆಂಗಳೂರು
8. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
10. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ, ಇವರು ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ ಮುಖಾಂತರ ಅವರ ಸ್ವ ವಿಳಾಸಕ್ಕೆ ಜಾರಿ ಮಾಡತಕ್ಕದ್ದು ಹಾಗೂ ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಿ ಹಾಗೂ ಇವರಿಂದ ಸರ್ಕಾರಕ್ಕೆ ಬರಬೇಕಾಗಿರುವ ಬೇಬಾಕಿ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡತಕ್ಕದ್ದು.
11. ನಿರ್ದೇಶನಾಲಯದ ಆಪ್ತ ಶಾಖೆಗೆ
12. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
13. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
14. ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಕಸ್ತೂರಿ ಬಾ ರಸ್ತೆ, ಬೆಂಗಳೂರು.
15. ಸಹಾಯಕ ಆಡಳಿತಾಧಿಕಾರಿಯವರಿಗೆ (1), (2), (3)
16. ರಿಜಿಸ್ಟ್ರಾರ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
17. ಇಎಸ್‌ಟಿ (3), (7), (8)ಬಿ, (9), ನಗದು ವಿಭಾಗ. ಲೆಕ್ಕ ಪತ್ರ ವಿಭಾಗ, ಅಂಕಿ ಸಂಖ್ಯೆ ವಿಭಾಗ, ಹೆಚ್.ಆರ್.ಎಂ.ಎಸ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.